# ಪ್ರವಾದಿಯ ಕನಸು



1997 ರ 'ಮುದ್ದಣಕಾವ್ಯಪ್ರಶಸ್ತಿ' ಪಡೆದ ಕೃತಿ

ಬಿ.ಎಂ.ಬಶೀರ್

ಪ್ರಿಯ ಬಶೀರ್ ಅವರಿಗೆ,
ನಿಮ್ಮದೇ ಕೃತಿ...
ನಿಮಗೆ ಪ್ರೀತಿಯಿಂದ..!!

[illegible]
17.10.2014.

# ಪ್ರವಾದಿಯ ಕನಸು

ಕಾಂತಾವರ ಕನ್ನಡ ಸಂಘದ ಪಠೇಲ್ ಪುನರೂರು ವಾಸುದೇವ
ರಾವ್ ಟ್ರಸ್ಟಿನ ಮುದ್ರಣ ಕಾವ್ಯ ಪ್ರಶಸ್ತಿ ಪುರಸ್ಕೃತ ಕೃತಿ

ಬಿ. ಎಂ. ಬಶೀರ್

ಸಾಹಿತ್ಯ ಪ್ರಕಾಶನ, ಮುಂಬಯಿ.

PRAVADIYA KANASU a Collection of poems (Muddana Kavya Prashasti award winning Poem Collection) by B.M. Basheer 16, Devji Jagan Estate, Gamdevi Road, Bhandup, Mumbai -78 & Published by Sahithya Prakashana, 72/2433, Nehru Nagar, Kurla, Mumbai - 400 072.

First Impression : November, 1997.

No. of Pages : XII+ 62

Copy Right : Authour

Cover Page : Giridhar Karkal

Price : Rs.40/-

ಪ್ರಥಮ ಮುದ್ರಣ : ನವೆಂಬರ್, 1997

ಹಕ್ಕುಗಳು : ಲೇಖಕರದ್ದು

ರಕ್ಷಾ ಪುಟ : ಗಿರಿಧರ ಕಾರ್ಕಳ

ಪ್ರಕಾಶಕರು :

ಸಾಹಿತ್ಯ ಪ್ರಕಾಶನ, 72/2433, ನೆಹರು ನಗರ, ಕುರ್ಲಾ,ಮುಂಬಯಿ.

*ಟೈಪ್ ಸೆಟ್ಟಿಂಗ್ ಮತ್ತು ಮುದ್ರಣ :*

ಆಶೀಷ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್, 216, ಹಿರಾನಂದಾನಿ ಇಂಡಸ್ಟ್ರಿಯಲ್ ಎಸ್ಟೇಟ್, ಕಾಂಜೂರ್‌ಮಾರ್ಗ(ಪ), ಮುಂಬಯಿ-400 078.

ದೂರಧ್ವನಿ : 5783061

ಸದಾ ನೆನಪಾಗಿ

ಎದೆಯೊಳಗೆ

ಮೊರೆವ

ಅಕ್ಕ

ಬೀಪಾತುಮ್ಮಾಳಿಗೆ

## ನಮ್ಮ ನುಡಿ

ಮುಂಬಯಿಯ ಕನ್ನಡ ಸಾಹಿತ್ಯಕ್ಕೆ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅರ್ಥಪೂರ್ಣ ಸೇವೆಗಾಗಿ ಹಾಗೂ ಮುಂಬಯಿ ಕಾಲೇಜುಗಳಲ್ಲಿ ಕನ್ನಡ ಪ್ರಾಧ್ಯಾಪಕರೊಬ್ಬರಿಗೆ ಪ್ರಿನ್ಸಿಪಾಲ್ ಹುದ್ದೆ ಕೊಟ್ಟು ಗೌರವಿಸಿದ ನಿಮಿತ್ತವಾಗಿ ೧೫--೩-೧೯೯೨ ರಂದು ಮುಂಬಯಿ ಕನ್ನಡಿಗರು, ಗೆಳೆಯರು, ಅಭಿಮಾನಿಗಳು, ವಿದ್ಯಾರ್ಥಿಗಳು, ಕನ್ನಡ ಸಂಘ ಸಂಸ್ಥೆಗಳು ಸೇರಿ ಪ್ರಿನ್ಸಿಪಾಲ್ ಜಿ. ಡಿ. ಜೋಶಿ ಅವರಿಗೆ ಒಂದು ಅಪೂರ್ವವಾದ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ|| ಆರ್. ಸಿ. ಹಿರೇಮಠ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾದ ಈ ಸಮಾರಂಭಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ|| ಹಂ.ಪ. ನಾಗರಾಜಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸನ್ಮಾನ ಮಾಡಿದರು.ಈ ಸಂದರ್ಭದಲ್ಲಿ ಸನ್ಮಾನ ಸಮಿತಿಯು ಪ್ರಿನ್ಸಿಪಾಲ್ ಜಿ.ಡಿ. ಜೋಶಿ ಅವರಿಗೆ ಒಂದು ಹಮ್ಮಿಣಿಯನ್ನು ಅರ್ಪಿಸಿತು.

ಸಮಾಜದಿಂದ ದೊರೆತ ಈ ಹಮ್ಮಿಣಿಗೆ ನನ್ನ ನಾಲ್ಕು ಸಾವಿರ ರೂಪಾಯಿಗಳನ್ನು ಸೇರಿಸಿ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ದತ್ತಿ ನಿಧಿಯನ್ನೂ, ಒಂದು ವಿದ್ಯಾರ್ಥಿವೇತನವನ್ನೂ ಹಾಗೂ ಪ್ರತಿ ವರ್ಷ ಒಂದು ಗ್ರಂಥವನ್ನು ಪ್ರಕಟಿಸುವ ಹೊಣೆಯನ್ನು ವಹಿಸಿಕೊಳ್ಳುವುದಾಗಿ ಆ ಸಂದರ್ಭದಲ್ಲಿ ಸಾರಿದೆನು. ಆ ಯೋಜನೆಗೆ ಅನುಗುಣವಾಗಿ ಈ ಗ್ರಂಥ ಪ್ರಕಟವಾಗುತ್ತಿದೆ. ಈ ಪ್ರಕಟನಾಕಾರ್ಯದಲ್ಲಿ ನನಗೆ ನನ್ನ ಆತ್ಮೀಯ ಮಿತ್ರರಾದ ಪ್ರೊ || ಸೀತಾರಾಮ ಆರ್. ಶೆಟ್ಟಿ ಅವರು ನೆರವು ನೀಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ಪ್ರಿನ್ಸಿಪಾಲ್ ಜಿ.ಡಿ. ಜೋಶಿ ಸನ್ಮಾನ ಸಮಿತಿಯ ಹಮ್ಮಿಣಿಯಿಂದ ಪ್ರಕಟವಾಗುತ್ತಿದ್ದ ಗ್ರಂಥಮಾಲೆಯ ಪ್ರಥಮ ಕುಸುಮ ಶ್ರೀಮತಿ ತುಳಸಿ ವೇಣುಗೋಪಾಲ್ ಅವರ ಪ್ರಥಮ ಕಥಾಸಂಕಲನ ಮುಂಜಾವಿಗೆ ಕಾದವಳು 1993ರಲ್ಲಿಯೇ ಪ್ರಕಟವಾಯಿತೆಂದು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ಎರಡನೆಯ ಕುಸುಮವಾಗಿ ಅದೇ ಯೋಜನೆಯಲ್ಲಿ ಸಾ.ದಯಾ ಅವರ ಪ್ರಥಮ ಕವನ ಸಂಕಲನ

"ಜಾತ್ರೆಯ ಮರುದಿನ" 1994ರಲ್ಲಿ ಪ್ರಕಟವಾಗಿದೆ. ಮೂರನೆಯ ಕುಸುಮವಾಗಿ ಡಾ|| ಶ್ರೀಮತಿ ಗಿರಿಜಾ ಶಾಸ್ತ್ರಿ ಅವರ ಪ್ರಥಮ ಸಂಕಲನ "ಹೆಣ್ಣೊಬ್ಬಳ ದನಿ" 1995ರಲ್ಲಿ ಪ್ರಕಟವಾಯಿತು. ನಾಲ್ಕನೆಯ ಕುಸುಮವಾಗಿ ಕುಮಾರಿ ಜೆ.ಪಿ. ಕುಸುಮಾ ಅವರ ಪ್ರಥಮ ಕವನ ಸಂಕಲನ "ಪರುಷ" 1996ರಲ್ಲಿ ಬೆಳಕು ಕಂಡಿತು. ಈ ಯೋಜನೆಯ ಕೃತಿಗಳಿಗೆಲ್ಲಾ ಒಳ್ಳೆಯ ಪ್ರತಿಕ್ರಿಯೆ ದೊರೆತಿರುವುದು ಸಮಾಧಾನ ಉಂಟುಮಾಡುವ ವಿಷಯವಾಗಿದೆ.

ಮುದ್ದಣ ಕಾವ್ಯ ಪ್ರಶಸ್ತಿ ಪಡೆದ ಈ ಯೋಜನೆಯಲ್ಲಿ ಬಿ.ಎಂ. ಬಶೀರ್ ಅವರ ಪ್ರಥಮ ಕವನ ಸಂಕಲನ ಪ್ರವಾದಿಯ ಕನಸು ಈಗ 1997ರಲ್ಲಿ ಪ್ರಕಟವಾಗುತ್ತಿದೆ. ನಮ್ಮ ಪ್ರಕಾಶನದಲ್ಲಿ ಪ್ರಕಟಿಸಲು ಅನುಮತಿ ನೀಡಿದ ಬಶೀರ್ ಅವರಿಗೆ ನಮ್ಮ ಧನ್ಯವಾದಗಳು. ಇದಕ್ಕೆ ಬೆನ್ನುಡಿ ಬರೆದ ಶ್ರೀ ಜಯಂತ ಕ್ಯಾಕಿಣಿ ಅವರಿಗೆ, ಮುಖಪುಟಕ್ಕೆ ಸುಂದರ ಚಿತ್ರ ಬಿಡಿಸಿದ ಶ್ರೀ ಗಿರೀಧರ್ ಕಾರ್ಕಳ್ ಅವರಿಗೆ, ಆಕರ್ಷಕವಾಗಿ ಮುದ್ರಿಸಲು ನೆರವಾದ ಪ್ರೊ. ಸೀತಾರಾಮ ಆರ್. ಶೆಟ್ಟಿ ಹಾಗೂ ಅವರ ಸಹೋದ್ಯೋಗಿಗಳಿಗೆ ನಮ್ಮ ನಮನಗಳು.

ನಮ್ಮ ಪ್ರಕಾಶನದಲ್ಲಿ ಶ್ರೀಮತಿ ಮಿತ್ರಾ ವೆಂಕಟರಾಜ್ ಅವರ ಕಥಾಸಂಕಲನ "ಹಕ್ಕಿ ಮತ್ತು ಅವಳು" 1997ರಲ್ಲಿಯೇ ಪ್ರಕಟವಾಗಿದೆ. ಶ್ರೀಮತಿ ಮಿತ್ರಾ ಅವರು ಕೃತಿ ಪ್ರಕಟಿಸಲು ಕೊಟ್ಟ ಅನುಮತಿಗಾಗಿ ನಮ್ಮ ಹಾರ್ದಿಕ ವಂದನೆಗಳು. ಸಾಹಿತ್ಯ ಪ್ರಕಾಶನದಲ್ಲಿ ಪ್ರಕಟವಾದ ಕೃತಿಗಳಲ್ಲಿಶ್ರೀಮತಿ ತುಳಸಿ ವೇಣುಗೋಪಾಲ ಅವರ "ಮುಂಜಾವಿಗೆ ಕಾದವಳು" ಕಥಾಸಂಕಲನಕ್ಕೆ 'ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ' ದೊರೆತಿದೆ. ಡಾ|| ಗಿರಿಜಾ ಶಾಸ್ತ್ರಿ ಅವರ ಕವನ ಸಂಕಲನ "ಹೆಣ್ಣೊಬ್ಬಳ ದನಿ"ಗೆ ಹರಿಹರ ಪ್ರಶಸ್ತಿ ದೊರೆತಿದೆ. ಹಾಗೂ ಈ ಗ್ರಂಥ "ಪ್ರವಾದಿಯ ಕನಸು"(1997)ಗೆ ಮುದ್ದಣ ಕಾವ್ಯ ಪ್ರಶಸ್ತಿ ದೊರೆತಿದೆ. ಈ ಕೃತಿಕಾರರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಓದುಗರು ಈ ಕೃತಿಯನ್ನು ಸ್ವಾಗತಿಸುವರೆಂಬ ಭರವಸೆ ನನಗಿದೆ.

72/2433 Nehru Nagar,
Om CHS, Kurla (E),
Mumbai -24.
Tel.: 523 12 60

**ಡಾ|| ಜಿ. ಡಿ. ಜೋಶಿ**
11-10-1997

ಉಮ್ಮಾನಿಗೆ

ಪತ್ರ ಬರೆದು ತಿಳಿಸಿದೆ;
ಇಲ್ಲಿ ನನ್ನವರೆನ್ನಬಹುದಾದ ಕೆಲವರು
ನಿನ್ನ ಮತ್ತು ನನ್ನದೆನ್ನಬಹುದಾದ ಸಾಲುಗಳನ್ನೆಲ್ಲಾ
ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾರಂತೆ
ಸಂತೋಷವೇ......
ತಾಯಿ ಬರೆದಳು;
ಮಗುವೇ
ನಿನ್ನ ಹಾಲು ಸುರಿವ ಕೆನ್ನೆಗೆ ನನ್ನ ಮುತ್ತುಗಳು.
ನೀನೇನು ಬರೆದೆಯೋ, ಬರೆವೆಯೋ
ಅದೆಲ್ಲಾ ನನ್ನ ನಿನ್ನ ದೇವರಿಗೆ ಸಲ್ಲುವಂತಿರಲಿ
ಸುಳ್ಳುಗಳ ಕಾಡಲ್ಲಿ
ಪೊಟರೆ ಕೊರೆದು ಬದುಕುವವರ ಕಣ್ಣು
ನಿನ್ನ ಮೇಲೆ ಬೀಳದಿರಲಿ
ಒರುಮ ನಾಕು ಮಕ್ಕಳ ಜತೆ ಮೊನ್ನೆ ಬಂದಿದ್ದಳು
ನಿನ್ನ ನೆನಸಿದಳು
ಪುಸ್ತಕದಲ್ಲಿ ನಿನ್ನದೊಂದು ಚಿತ್ರ ಹಾಕು
ನಿನ್ನ ನೆನಪಿಗೆ ನನಗದುವೇ ಸಾಕು.

* * *

ಕವಿತೆಯ ಎದೆಬಡಿತ ಆಲಿಸುವ
ಜಾದೂ ತಿಳಿಸಿಕೊಟ್ಟ ನನ್ನ
ಪ್ರೀತಿಯ ಕವಿ ಜಯಂತ್
ಗೆಳೆಯ ಸಾ. ದಯಾ
ಜತೆಗೆ 'ಚುಕ್ಕಿ' ಬಳಗ
ಮುಖ ಚಿತ್ರ ಬೇಕೆಂದು ಮನೆಗೆ ಹೋದರೆ
ಊಟ ಇಕ್ಕಿ, ನಾಲ್ಕು ಪುಸ್ತಕ ಕೊಟ್ಟು
ಆಗಾಗ ಬರುತ್ತಿರಿ ಎಂದ ಕಲಾವಿದ ಗಿರಿಧರ್ ದಂಪತಿಗಳು
ಸಂಕಲನದ ಬೆನ್ನು ಹತ್ತಿ; ಈ ಪುಸ್ತಕ ಕಂಡ ಬೆಳಕಿಗೆ
ಕಾರಣರಾದ ಪ್ರಾ. ಸೀತಾರಾಮ ಆರ್. ಶೆಟ್ಟಿ
ಗುರು ಡಾ. ಜಿ.ಡಿ. ಜೋಶಿ ಮತ್ತು ಅವರ
ಸಾಹಿತ್ಯ ಪ್ರಕಾಶನ, ಪ್ರೀತಿಯ ಚಂದ್ರಶೇಖರ ಪಾಲೆತ್ತಾಡಿ
ಸದಾ ನನ್ನ ಕವಿತೆಗಳ ಜತೆ ಜಗಳ ಕಾಯುತ್ತಿದ್ದ
ಜಗಳಗಂಟ ಗೆಳೆಯ ದಯಾಸಾಗರ್
ನನ್ನ ಕವಿತೆಗಳ ಎತ್ತಿ ಮುದ್ದಿಸಿ
ಪ್ರಶಸ್ತಿಯ ಕುಲಾವಿ ತೊಡಿಸಿದ ಕಾಂತಾವಾರ ಕನ್ನಡ ಸಂಘ,
ನಾ. ಮೊಗಸಾಲೆ
ಜತೆಗೆ
ಪ್ರಜಾವಾಣಿ, ಉದಯವಾಣಿ, ಲಂಕೇಶ್, ತರಂಗ, ಕಸ್ತೂರಿ
ಕರ್ನಾಟಕ ಮಲ್ಲ, ನೇಸರು, ಮುಂಬಯಿವಾಣಿ
ವಿಜೇತ, ಸಂಬಂಧ
ಹೀಗೇ.....
ನನ್ನ ಕವಿತೆಗಳ ಹಿಂದಿರುವ ಅಸಂಖ್ಯ
ಪ್ರೀತಿ ವಿಶ್ವಾಸಗಳಿಗೆ
ಕೃತಜ್ಞ.

18-09-1997
ಮುಂಬಯಿ

— ಬಿ. ಎಂ. ಬಶೀರ್

## ಕನಸಿನ ಜತೆ ಹೆಜ್ಜೆ


| | | |
|---|---|---|
| 1 | ಸೃಷ್ಟಿ | 1 |
| 2 | ಗೆಳೆಯ | 4 |
| 3 | ಪಾವತಿ | 6 |
| 4 | ಪ್ರಾರ್ಥನೆ. | 7 |
| 5 | ತಾಯಿ | 8 |
| 6 | ತಂಗಿ ಬರೆದಿದ್ದಾಳೆ | 9 |
| 7 | ಚುಕ್ಕಿಗಳು-೧ | 11 |
| 8 | ಚುಕ್ಕಿಗಳು-೨ | 13 |
| 9 | ಪ್ರವಾದಿ | 15 |
| 10 | ಪ್ರವಾದಿಯ ಕನಸು | 17 |
| 11 | ಬೇಡ | 19 |
| 12 | ಕದನ ವಿರಾಮ | 21 |
| 13 | ಹಸುವಿನಂತೆ ಪ್ರೀತಿ | 23 |
| 14 | ಪತ್ರ | 25 |
| 15 | ಆ ನಾಕು ಸಾಲುಗಳು | 27 |
| 16 | ಮದುವಣಗಿತ್ತಿಯ ಕೊನೆಯ ಕ್ಷಣಗಳು | 29 |

| | | |
|---|---|---|
| 17 | ಚಪ್ಪರ ಕಳೆಯುವ ಹೊತ್ತು | 31 |
| 18 | ಸಾರ್... ನನ್ನ ಗಾಡಿಯೆಲ್ಲಿ? | 34 |
| 19 | ಒಂದು ಹುಟ್ಟುಹಬ್ಬದ ಕ್ಷಣ | 37 |
| 20 | ಸಂಪಿಗೆ ಹುಡುಗಿಯ ಕಂಕುಳಲ್ಲಿ | 40 |
| 21 | ಆತ್ಮಾಳದ ರಾತ್ರಿ | 42 |
| 22 | ಅವಳು | 44 |
| 23 | ಕನಸು | 46 |
| 24 | ಕೂಡುವ ಹಾಡು | 49 |
| 25 | ಹನಿಗಳು | 51 |
| 26 | ಗಾಯ | 53 |
| 27 | ಹುಚ್ಚು ಹುಡುಗ | 55 |
| 28 | ದಡ ಕಾಣುವವರೆಗೆ | 57 |
| 29 | ಶಹರದಲ್ಲಿ ಹದಿಹರೆಯ | 59 |
| 30 | ವಿದಾಯ | 61 |

ಅಸ್ತವ್ಯಸ್ತ ಚುಕ್ಕಿಗಳು
ನಿನ್ನ ಕಣ್ಣ ಬಾಗಿಲ ಬಳಿ.
ತಟ್ಟೆ ಹಿಡಿದ ಅನಾಥ ಮಕ್ಕಳು.....
ಸಾಕು ಎರಡು ಹನಿಗಳು
ತುಂಬಿ ಬಿಡಲಿ ತಟ್ಟೆ.....

## ಸೃಷ್ಟಿ

ಈ ಆಕಾಶ ಹರಿ-
ದಾಗ ಹೊಲಿಯುವುದಕ್ಕೊಬ್ಬ
ದರ್ಜಿ
ನೆಲ ತಳ ತಪ್ಪಿ ಕುಸಿದಾಗ
ಎತ್ತಿ ಹಿಡಿಯುವುದಕ್ಕೊಂದು
ಕಿರು ಬೆರಳು
ನಗು-ಅಳು ಬಿಡಿ,
ಹೃದಯವೇ ಇಲ್ಲದ ಕೂಸೊಂದು ಹುಟ್ಟಿದಾಗ
ಉಸಿರು ತುಂಬುವ ಮಾಯಗಾರನ
ಕನಸಲ್ಲಿ ಚಿಗುರುವುದು ಕವಿತೆ!

ದಾರ ಕಡಿದ ಗಾಳಿಪಟ
ಎದೆ ಹರಿದು ಪಟಪಟ ಒದ್ದಾಡಿ

ಕುಸಿದಾಗ - ಎತ್ತಿ ಎದೆ
ನೀವಿ ಸಂತೈಸುವ ದಾದಿ
ಕುದಿವ ದಾಹಕ್ಕೆ ಉಕ್ಕೆನ್ನುವಾಗ ನದಿಗೆ
ಯಾರದಾದರೊಂದು ಶಿರದಿಂದ ಸುರಿವ ಗಂಗೆ
ಹಟ್ಟಿಯಲ್ಲಿ ಕಟ್ಟಿದ ಗೌರಿಯ
ಕೆಚ್ಚಲಲಿ ಹೊಗೆಯಾಡಿದಾಗ ವಿಷ
ತಣ್ಣಗೆ ಆರಿಸಿ ಹೀರುವ
ಮುದ್ದು ಕೃಷ್ಣನ ಕನಸಲ್ಲಿ
ಚಿಗುರುವುದು ಕವಿತೆ!

ಬೆಟ್ಟದ ನೆತ್ತಿಗೇ ಚೂರಿ ನೆಟ್ಟಾಗ
ಮೆತ್ತಿದ ನೆತ್ತರ ಸವರಿ ಹತ್ತಿಯಿಟ್ಟು
ಶೂ ಮಂತ್ರ ಹೇಳುವ ಅಶ್ವಿನೀ ಕುಮಾರರ
ವಾರಸುದಾರರೇ ಇಲ್ಲದ ಕಣ್ಣ ಹನಿಯೊಂದು
ಗಲ್ಲಿ ಗಲ್ಲಿ ಅಂಡಲೆದು ಯಾರದೋ ವಿಳಾಸವನು
ತಟ್ಟಿ; ಕರೆದಾಗ
ಪಕ್ಕನೆ ಬಾಗಿಲ ತೆರೆದು ಹೂ ನಗುವ ಅಮ್ಮ
ಅಥವಾ....
ವೈಶಾಖದ ಕುದಿಗೆ ದೃಷ್ಟಿ ಕೊಟ್ಟು-ಸುಟ್ಟು
ಹೋಗುವವಳ ಸಂತೈಸಿ
ತೊಟ್ಟಿಲಿಟ್ಟು ತೂಗುವ ಬೆಳದಿಂಗಳ...

ಇವೆಲ್ಲ ಬಿಡಿ ಬೇಕಾದರೆ
ಪ್ರಸವ ಬೇನೆಯ ಕತ್ತರಿಸುವ ಉರಿಯಲ್ಲಿ
ಕವಿ ಅಲ್ಲಿಗೇ ಕಣ್ಣು ಮುಚ್ಚಿದರೆ

ಅವನ ಗೋರಿಯ ಮೇಲೆ
ಗುಲಾಬಿ ಗಿಡವೊಂದು ಅಂಕುರವಿಟ್ಟಾಗ
ಕವಿಯಿಲ್ಲದೆಯೂ
ಚಿಗುರುವುದು ಕವಿತೆ !

## ಗೆಳೆಯ

ತುಂಟ ಗೆಳೆಯನೊಬ್ಬನಿದ್ದ
ಬಯಲು ಗುಡ್ಡ ನದಿ ಗದ್ದೆ
ಇಲ್ಲೆಲ್ಲಾ ಹೆಜ್ಜೆ ಬಿತ್ತಿ
ಹಸಿರು ಬೆಳೆಸುತಿದ್ದ !

ಇರುಳು ಹರಿವವರೆಗೆ ಹರಟೆ
ಒಮ್ಮೆಲೆ ಮುಖ ಉಬ್ಬಿಸಿ
ಮೂರು ದಿನ ಮೌನ
ಇರುಳೊಡೆದು ಸೂರ್ಯ ಅಂಕುರವಿಟ್ಟ ಕ್ಷಣ
ಕೈಯಲ್ಲಿ ಸಂಧಾನದ ಅರ್ಜಿ !

ಧೈರ್ಯದ ಎದೆ ನಡುಗಿಸುವವನು
ನನ್ನ ಕವಿತೆಗೆ ಬೆಚ್ಚಿ

'ಕಿವುಡನ ಮಾಡಯ್ಯ ತಂದೆ...!' ವಚನ ಬಾಯಿ ಪಾಠ
ಆಕಾಶದ ಅಟ್ಟಣಿಗೆಗೆ
ಮುಗಿಲು ಮುಟ್ಟಿದ ವೃಕ್ಷಗಳ ಏಣಿ
ಏರಿ; ಬೊಗಸೆ ತುಂಬಾ ಅಮೃತ ಫಲಗಳ ತಂದ
ನನ್ನ ಅಣಕಿಸಿ ತಿಂದ!

ಇದ್ದಕಿದ್ದಂತೆಯೇ ನನ್ನೆದುರು
ಯಾವಳೋ ಅಭಿಸಾರಿಕೆಯ ಭೂಪಟ ಹಾಸಿ
'ಹೇಳು ಕವಿಯೇ ಹೇಳು
ಇಲ್ಲಿ ಎಲ್ಲಿ ನದಿ
ಹಿಮ ಬೆಟ್ಟ ಸುರಿವ ಜಲಪಾತ' ಎಂದ
ಕಣ್ತುಂಬ ಕವಿಯಾಗಿ ಅತ್ತ!

ನಾನೋ ದುಂದುಗಾರ
ಅವನ ಪ್ರೇಮ ಮೌನ ನಿಗೂಢವೆಲ್ಲವನ್ನ
ಎಲ್ಲಾದರೂ ಠೇವಣಿ ಇಡಬೇಕಾಗಿತ್ತು
ಬಂದ ಬಡ್ಡಿಯಿಂದ ಇಂದು ಸುಖವಾಗಿ ಉಣ್ಣಬಹುದಿತ್ತು!

## ಪಾವತಿ

ಗುಲಾಬಿ ಮತ್ತು ಕವಿತೆ ಜತೆ
ಬರುತ್ತಿದ್ದೇನೆ
ಧಾರಾವಿಯ ಕಪ್ಪು ಬೆಳಕಿನ ದಾರಿ ಒಡೆದು
ಎದ್ದು ಬಂದ ಪುಟ್ಟ ಮಗು
ಗುಲಾಬಿಯನ್ನು ಕೈಮಾಡಿ ಕರೆಯಿತು
ನನ್ನ ಕವಿತೆ ಗುಲಾಬಿಯ ಜತೆ
ಮಗುವಿನ ಕಣ್ಣಲ್ಲಿ
ಇಂಗಿ ಹೋಯಿತು
ಪಡೆದ ಸಾಲ ಮರಳುವಂತೆ !

## ಪ್ರಾರ್ಥನೆ

ನನ್ನೆದುರಲ್ಲೇ
ಮಿಲಿಟರಿ ವ್ಯಾನೊಂದು ಸರಿದು ಹೋದದ್ದು
ಪುಟ್ಟ ಮಗು ಅವರತ್ತ ಕೈಯಾಡಿಸಿದ್ದು
ಬಾಗಿಲ ಪಕ್ಕ
ಕುಳಿತ ಯೋಧನೊಬ್ಬ
ಅವನ್ನು ಸ್ವೀಕರಿಸಿದ್ದು
ಒಂದೇ ಕ್ಷಣಕ್ಕೆ ನಡೆದು ಹೋಯಿತು !

ಆ ಕ್ಷಣ
ದೇವರಿಗೆ ಸಂದು ಹೋಯಿತು !

## ತಾಯಿ

ಅವಳ ಮಡಿಲಲ್ಲಿ ಮುಳುಗೇಳುತ್ತಿದ್ದ ಮಗು
ಪಕ್ಕನೆ
ಅವಳ ಮುಖ ಪರಚಿ ಬಿಟ್ಟಿತು!
ಆ ಗಾಯವನ್ನು ಮಾಗದಂತೆ
ಜೋಪಾನ ಇಟ್ಟು
ತಾಯಿ ನರಳುತ್ತಾಳೆ
ಇಂದಿಗೂ ಸುಖದಿಂದ!

## ತಂಗಿ ಬರೆದಿದ್ದಾಳೆ

ನನ್ನ ಪುಟ್ಟ ತಂಗಿಗೀಗ ತಿಳಿದು ಹೋಗಿದೆ
ನಾ ಕೊಟ್ಟ ನವಿಲು ಗರಿಗೆ ಎಂದೂ
ಜೀವ ಬರುವುದಿಲ್ಲ ಎಂದು
ಪತ್ರದಲ್ಲಿ ತಿಳಿಸಿದ್ದಾಳೆ
ನಾನೀಗ ಬೆಳೆದಿದ್ದೇನೆ!

ಹಾರಿ ಬಿಟ್ಟ ಗಾಳಿಪಟ
ದೈತ್ಯ ವೃಕ್ಷದ ಎದೆಗೂಡೊಳಗೆ ಸಿಕ್ಕಿ
ಹರಿದು ಚಿಲ್ಲಾಪಿಲ್ಲಿಯಾದ ಬಗೆ;
ನಿನ್ನೆಯ ಮುಂಗಾರು ಮಳೆ ತಿಳಿಸಿ ಹೋಗಿದೆ...
ನೀ ಕೊಟ್ಟ ಕಾಗದದ ದೋಣಿ
ಆದರೊಳಗೇ ಕರಗಿ ಕಡಲ ಸೇರಿದೆ!

ತಿಳಿಸಿದ್ದಾಳೆ-
ಏಳು ಕೋಟೆಯ ಒಳಗಿರುವ
ಮಲ್ಲಿಗೆ ತೂಕದ ರಾಜಕುಮಾರಿ
ಕುದುರೆಯೇರಿ ಬರುವ ರಾಜಕುವರನ
ಕಾದು- ಸೋತು
ತಾನೇ ಕೋಟೆಯೇರುವ ಹುನ್ನಾರ ನಡೆಸಿದ
ಹೊಸ ಕಥೆ!
ಪಶ್ಚಿಮದ ಗಾಳಿ ಅವಳ ಕೆನ್ನೆ ಸವರಿ
ಉಸುರಿದ ಬಗೆ
ತಿಳಿಸಿದ್ದಾಳೆ ಪತ್ರದಲ್ಲಿ....

ನೀ ಮುತ್ತಿಕ್ಕಿದ ಹಾಲ್ಗೆನ್ನೆಯಲ್ಲೀಗ
ಮೊಡವೆಯೆದ್ದು ಕೀವು ತುಂಬಿದೆ
ಅದೀಗ
ಒಡೆಯುವುದಕ್ಕೆ ಕಾದು ನಿಂತಿದೆ!

## ಚುಕ್ಕಿಗಳು - ೧

ಸಾರಿಸಿಟ್ಟ ಅಂಗಣದಂತೆ
ನನ್ನ ನಿನ್ನ ನಡುವೆ
ಈ ಮೌನ! ಅಲ್ಲಿ ನಾ ಎಳೆದ
ಎರಡು ಸಾಲು ಚಿನ್ನದ ಚುಕ್ಕೆ
ಕುಳಿತಂತೆ ಬ್ರಾಹ್ಮಣರು ಭೋಜನಕ್ಕೆ!
ಮದುವೆಗೋ.....
ಶ್ರಾದ್ಧಕ್ಕೋ.....
ಗೆಳತಿ ನೀ ಹೇಳಬೇಕು!

ಇನ್ನೆರಡು ಚಿಟಿಕೆ ಸೇರಿದರೆ ಜೀವ
ತಳೆಯಬಹುದು ಹಕ್ಕಿ;
ನಿನ್ನ ಸ್ಪರ್ಶಕ್ಕೆ
ಪಟ ಪಟಾಯಿಸಬಹುದು ರೆಕ್ಕೆ

ಮುಗಿಲ ರಥಕ್ಕೆ ಚಿನ್ನದ ತೋರಣ
ಕಡಲ ಉಬ್ಬರದಂತೆ ದಿಬ್ಬಣ!
ರಥವೇರಿ ಕುಳಿತ ಮದುಮಗನ ಹತ್ತಿರ
ಮದುಮಗಳ ಕೇಳಿದರೇನು ಉತ್ತರ!?

ಅಸ್ತವ್ಯಸ್ತ ಚುಕ್ಕಿಗಳು
ನಿನ್ನ ಕಣ್ಣ ಬಾಗಿಲ ಬಳಿ
ತಟ್ಟೆ ಹಿಡಿದ ಅನಾಥ ಮಕ್ಕಳು!
ಸಾಕು ಎರಡು ಹನಿಗಳು
ತುಂಬಿ ಬಿಡಲಿ ತಟ್ಟೆ!

ನಿರ್ಲಕ್ಷ್ಯ ಬೇಡ
ಇದು ನನ್ನ ಹುಟ್ಟಿಗೆ ದೇವರಿಟ್ಟ ಮೊದಲ ಬಿಂದು
ಎರೆದು ಕೊಡುವೆ ನಗುನಗುತಾ
ಧನ್ಯವಾಗಲಿ ನಿನ್ನ ಪಾದಕೆ ಸಂದು!

## ಚುಕ್ಕಿಗಳು – ೨

ನೀ ಗುಡಿಸಿ ಸಾರಿಸಿದ ಅಂಗಳದ ಮಧ್ಯೆ ನಾ
ಕಣ್ಣು ತಪ್ಪಿಸಿ ನಾಲ್ಕು ಚುಕ್ಕಿಯಿಟ್ಟೆ
ರಂಗೋಲಿ ಹರಳುಗಳ ಬೊಗಸೆ ತುಂಬುತ ಬಂದ
ತರಳೆ ನೀ ತಿಳಿಯದೆಯೇ ತುಳಿದು ಬಿಟ್ಟೆ !

ಎತ್ತಿಕೊಳಬಾರದೆ; ಎತ್ತಿ ಸಂತೈಸಿಬಿಡು
ತುಳಿದ ತಪ್ಪಿಗೆ ಎದೆಗೊತ್ತಿ ಹಾಡು
ಹಟ ಬಿಡದೆ ಅಳುವಾಗ ಜೋ ಜೋ ಗುನುಗುನಿಸಿ
ಕೈ ತಟ್ಟಿ ತೋರಿಸು ಹಕ್ಕಿ ಗೂಡು !

ಅಕ್ಕ ಹಿರಿಯಕ್ಕನಲ್ಲಿಗೆ ಹೋಗಿ ದಿನವಾಯ್ತು
ಅಮ್ಮ ದೇವರ ಕೋಣೆ ಹೊಕ್ಕ ಹೊತ್ತು

ತಂಗಿ ಇಣುಕುವ ಮುನ್ನ ಹರಿಸಿ ಬಿಡು ಕಣ್ಣ
ಕಟ್ಟಿ ತೂಗೇ ನಿನ್ನ ತೊಟ್ಟಿಲನ್ನ !

ನಿನ್ನೆದೆಯ ಬಣ್ಣಗಳ ಒಂದಿಷ್ಟು ಹಂಚಿ ಬಿಡು
ಇಂಗಿ ಹೋಗಲಿ ಅದರ ಅಳು ಹಸಿವು
ನಿನ್ನ ಸ್ಪರ್ಶದ ಮಾಯ ಗರಿಕಟ್ಟಿ ಕೊಡಲಿ
ಪಟ ಪಟಾಯಿಸಿ ರೆಕ್ಕೆ ಗೂಡ ಕಡೆಗೆ !

ಯಾವ ಆಗಸದ ಕಣ್ಣಿಂದ ಉದುರಿದ ಚುಕ್ಕಿ
ಎಂಬ ಹಮ್ಮೇಕೆ ನಿರ್ಲಕ್ಷ ಬೇಡ
ನನ್ನ ಹುಟ್ಟಿಗೆ ದೇವರಿಟ್ಟ ಮೊದಲಿನ ಬಿಂದು
ಧನ್ಯವಾಗಲಿ ನಿನ್ನ ಪಾದಕ್ಕೆ ಸಂದು !

## ಪ್ರವಾದಿ

ದೇವರ ಪಟ-
ದ ಮೇಲೆ ಗುಬ್ಬಚ್ಚಿ
ಬೆಳಕಿನ ಕಡ್ಡಿ
ಕೊಕ್ಕಲ್ಲಿ ಕಚ್ಚಿ
ನಿವೇಶನ ಕೋರಿ
ಕಣ್ಣಲ್ಲಿ ಸಣ್ಣ ಅರ್ಜಿ !

ಎಡವಿ ಅಮ್ಮನ
ಭಕ್ತಿ-
ಹಚ್ಚಿಟ್ಟ ಬತ್ತಿ
ದೇವರ ನೆತ್ತಿ ಮೇಲೆ ಪಾದ
ಇದಾವ ಚಾರ್ವಾಕ ವಾದ !?

ನಿಂತಲ್ಲೇ ಸೆಟೆದ
ದಿಟ್ಟಿ
ಪುಟ್ಟಿ ಸಾಮ್ರಾಟಿ
ಗರಿಗಳೆಡೆ ಬಚ್ಚಿಟ್ಟಿ
ಹತ್ಯಾರುಗಳ ಪಟಿಪಟಿ ಬಿಚ್ಚಿಟ್ಟಿ
ಕಟ್ಟುವುದಕ್ಕೀಗ ರೆಡಿ
ಬಹುಶಃ ಪುಟ್ಟಿ ಒಂದು ಗುಡಿ !

ಇರುಳು ಮುಗಿಯುವುದರಲ್ಲಿ
ಮನೆ ತುಂಬಾ
ಪ್ರೀತಿಗೆ ಭಾಷೆ
ಭಕ್ತಿಯ ಮಡಿಯುಟ್ಟು ಉಷೆ !

## ಪ್ರವಾದಿಯ ಕನಸು

ಪ್ರವಾದಿಯ ಕನಸುಗಳೇ ಹೀಗೆ
ಅದು ಎಲ್ಲಿದ್ದರೂ
ಯಾವ ಬೆಟ್ಟ ಏರಿದರೂ
ಕಣಿವೆ ಇಳಿದರೂ
ಕಡಲ ಮೊಗೆದರೂ
ಮುಟ್ಟುವುದು ಪ್ರೇಮದ ಬಾಗಿಲನ್ನ!
ಒಮ್ಮೆ ಹೀಗಾಯ್ತು......
ಪ್ರವಾದಿಯ ಒರೆಯಿಂದ ನೆಗೆದ ಆಜ್ಞೆಯ ಕತ್ತಿ
ಸರ್ವ ಮಧು ಪಾತ್ರೆಗಳನ್ನೂ ಒಡೆದು ಹಾಕಿದವು
ಸರ್ವ ಹಣ್ಣಿನ ರಸಗಳೂ
ಸರ್ವಶಕ್ತನ ಕಣ್ಣಿನ ಹನಿಯಾಗಿ ಇಳಿಯತೊಡಗಿದವು
ಕಡಾಯಿಗಳು ಕವುಚಿ ಬಿದ್ದವು!

ದೇವರು ಕರುಣಾಮಯಿ.....
ಎಲ್ಲಾ ಕಟ್ಟೆಗಳನ್ನೂ ಒಡೆದ ಖರ್ಜೂರ ರಸ
ಸುಡುವ ಮರುಭೂಮಿಯಲ್ಲಿ ನದಿಯಾಗಿ ಹರಿಯಿತು!
ಆ ನದೀ ತೀರದಲ್ಲಿ
ಅಮಲೇರಿಸುವ ಒಂದು ಸಂಜೆ
ಕುಡುಕನೊಬ್ಬ ಮೊರೆಯಿಟ್ಟನಂತೆ;
ಕರುಣಾಮಯಿಯೇ,
ಈ ನದಿಯಲ್ಲಿ ನಾನೆಂದಾದರೂ ಮುಳುಗಿ ಹೋದರೆ
ನಾ ಕಲಿತ ಈಜು ಮರೆತು ಹೋಗಲಿ
ಯಾವ ಅಂಬಿಗನೂ ನನ್ನ ಎತ್ತಿಕೊಳ್ಳದಿರಲಿ.

## ಬೇಡ !

ಬೇಡಾ ಅಂದ
ಬೇಡ !
ಇವೆಲ್ಲಾ ಬೇಕು
ಎನ್ನುವುದಕ್ಕೆ ಬೇಡ
ಬೇಡಾ ಅಂದ
ಬೇಡನ ಹುತ್ತ
ಕೊಡವಿ ಎದ್ದ
ಬೇಡಾ..... ಎಂಬ
ಶೋಕದ ಚಂದ
ಬೇಕು ಬೇಕೂ
ಎಂದು ಕುಕಿಲಿಟ್ಟು
ಕಾಡೂ...... ನಾಡೂ...
ಪ್ರತಿಧ್ವನಿಸಿ

ವಸಂತನಿಗೆ ಓಗೊಟ್ಟು
ಕೂಡೂ ಕೂಡೂ ಎಂದಿತು !
ಅತ್ತ
ಬೇಡ ಈಗ ಮುನಿ
ಎದೆಯ ದಾಹಕ್ಕೆ
ಕರಗಿದ ವಿಷಾದ
ಕುಡಿದ
ಕವಿಯಾದ ನಿಷಾದ !
ಎದೆಯಲ್ಲಿ ದಾರಿ ಕೊರೆದ
ರಂಗೋಲಿ ಹಾಸಿ
ರಾಮ ಸೀತೆಯ ಕರೆದ
ಹಾದಿ ತಪ್ಪಿ ಬಂದ
ರಾವಣನಿಗೆ
ಬೇಡಾ..... ಅಂದ !

## ಕದನ ವಿರಾಮ

ಮನೆ ತುಂಬಾ
ಅಮ್ಮನಿಗೆ ತಂದ
ಸೀರೆ ಕುರಿತು ಗುಲ್ಲೋ ಗುಲ್ಲು!
ಹಸಿರು ಅಂಚಿನ ಸೀರೆ;
ತುಂಬಾ ಅರಸಿನ ಬಣ್ಣ
ತಮ್ಮ ಸಿಡುಕಿದ
ದರ್ಗಾ - ಮಸೀದಿ ಮೇಲೆ
ಹಸಿರು ಬಾವುಟ
ಹಾರಿದ್ದು ಸಾಲದೇ!?
ಅಂಚು ಹಿಡಿಸಿಲ್ಲವೆಂದು ತಿರುಗಿಸಿದ ಕಣ್ಣ!
ಗುಡುಗಿದ ಅಣ್ಣ
ಈಗೀಗ ಮೆಚ್ಚುತ್ತಿದ್ದಾಳೆ ಅಮ್ಮ ಆರಸ್ಸೆಸ್ಸನ್ನ
ಇಲ್ಲವೆಂದರೆ ಸೀರೆಗ್ಯಾಕೆ ಕೇಸರಿ ಬಣ್ಣ

ಅವಳು ನಕ್ಕಳು
ಕನ್ನಡಿಯಂತೆ ಹೊಳೆವ ನೀರು
ಕೊಡ ತುಂಬಾ ಹೊತ್ತು ತಂದಳು
ತುಸು ಹೊತ್ತು ನೆನೆಯಿಟ್ಟು ಹೊರತೆಗೆದರೆ;
ಸೀರೆ...
ಥೇಟ್ ಅವಳ ನಗುವಿನಂತೆ
ಬಿಳಿಯ ಬಣ್ಣ!

## ಹಸುವಿನಂತೆ ಪ್ರೀತಿ

ಅಪರಿಚಿತನಿಗೆ ಪ್ರೀತಿ
ಹಸುವಿನಂತೆ
ಬೀಸಿದರೆ ಕೊಂಬು
ಎಂಬ ಚಿಂತೆ!

ಮೊದಲು ಪ್ರೀತಿಯ ನಂಬು
ಚಪ್ಪರಿಸಿ ಬೆನ್ನು
ಮುಖಕ್ಕೆ ಮುಖ ಉಜ್ಜಿ
ಇಡು ಕಣ್ಣಿಗೆ ಕಣ್ಣು
ಆರ್ದತೆಯನ್ನೆಲ್ಲಾ ನಿನ್ನೊಳಗೆ ತುಂಬು!

ಸರಪಳಿ ಬಿಚ್ಚು
ಪ್ರೀತಿಗೆ ಸ್ವಾತಂತ್ರ್ಯವೇ ಕೆಚ್ಚು

ಒಂದು ಹಿಡಿ ಮೇವು ಸಾಕು
ಈಗ ಕೆಚ್ಚಲಿಗೇ ಬಾಯಿ ಹಚ್ಚು!

ಪ್ರೀತಿ ಹಸುವಿನಂತೆ
ಮಾರುಕಟ್ಟೆ ಹೆಚ್ಚು
ಕಟುಕನ ಕತ್ತಿಗೆ ಚೂರು ಚೂರು
ಅಮ್ಮನ ಕೈಯಲ್ಲಿ
ಘಮ ಘಮಿಸುವ ಸಾರು!

# ಪತ್ರ

ಅಷ್ಟೂ ಶಬ್ದಗಳ ಸಾಲು
ಅಬ್ಬೆ ಹುಯ್ದಿಟ್ಟ ದೋಸೆ
ಹೆಬ್ಬೆಟ್ಟು ಚಟ್ನಿ
ನೆಂಜಿಕೊಳ್ಳುವುದಕ್ಕೆ ಒಂದಿಷ್ಟು
ಪತ್ರವೆಂದರೆ
ಪುಟ್ಟ ಬುತ್ತಿಗಂಟು !

ಒತ್ತೊತ್ತಿ ಸಾಗುವ ಶಬ್ದಗಳು
ಜಾತ್ರೆಗೆ ನೆರೆದ ಜನ
ಏರಿಳಿದು ಸಾಗುವ ಹಿತ್ತಿಲಾಚೆಯ ಗುಡ್ಡ
ಹರಿವಂತೆ ಸರಸರನೆ ತೊರೆ
ಉತ್ತ ಗದ್ದೆ

ಅಲ್ಲಲ್ಲಿ ಚಿತ್ತು-ಚಿತ್ತಾರ
ಸೆಗಣಿಯಿಟ್ಟಂತೆ ಹಟ್ಟಿಯ ದನ!

ಬಿಸಿಲೇರಿದ ಮಧ್ಯಾಹ್ನ
ಹಸಿರು ಚಪ್ಪರದ ಕೆಳಗೆ
ದಣಿದ ದಿಬ್ಬಣ
ಉಂಡಂತೆ ಭೂರಿ ಭೋಜನ
ಒಮ್ಮೊಮ್ಮೆ ಪತ್ರವೆಂದರೆ
ನಿರ್ಜನ-
ಮೌನ!

ಒರೆಯೊಳಗೆ
ನಿದ್ದೆ ಹೋದ ಖಡ್ಗ
ದಫನಕ್ಕೆ ಕಾದ ಹೆಣ
ಕಾಯುವ ನೆಪ
ಅವರವರ ಭಯ
ಪತ್ರವೆಂದರೆ......

ತೆರೆವವರೆಗಿನ ಇರುಳು
ತೆರೆದ ಬಳಿಕದ ಬಯಲು!

# ಆ ನಾಕು ಸಾಲುಗಳು

ಅಪರಿಚಿತ ಓಣಿಯಲ್ಲಿ
ತಡವರಿಸುವ
ಎಳೆ ಕಂಬನಿಯಂತಿರುವ
ಆ ನಾಲ್ಕು ಸಾಲುಗಳನ್ನು ಬರೆದೆ
ಕವಿತೆಯೆಂದು ಕರೆದೆ
ಅವರು ನಕ್ಕರೂ...

ಅದೆಷ್ಟು ಮನೆಗಳು
ವಜ್ರಖಚಿತ ಕಂಬಗಳಿಗೆ
ಗಲ್ಲವೂರಿ ಕುಳಿತಿದ್ದವು
ಹೊರಗೆ
ಚಾವಟಿಯಂತೆ ಬೀಸುವ ಮಳೆಗೆ
ಕೆಂಪಗೆ ಒದ್ದೆ
ಮೈ ನಡುಗಿ ನಿಂತೆ
ಅರಳಿ ದಾಸವಾಳದಂತೆ!

ಆ ನಾಕು ಸಾಲುಗಳು ನನ್ನವು
ಕಂಬಗಳಾಗಿ ನೆಲದಾಳಕ್ಕೆ
ಇಳಿದಿಳಿದು ಏರಿದವು
ಚಪ್ಪರ ಏರಿಸಿ ಒಲೆ ಹೂಡಿದೆ

ಆ ಸಾಲುಗಳು
ಅನಾಥ-
ನನ್ನ ಸಾವಿನ ಬಳಿಕ
ಕೊಳೆಯಗೊಡುವುದಿಲ್ಲ
ನಾಕು ಕಡೆ ಹೆಗಲು ಕೊಟ್ಟು
ಮಸಣ ಮುಟ್ಟುವ ತನಕ...

## ಮದುವಣಗಿತ್ತಿಯ ಕೊನೆಯ ಕ್ಷಣಗಳು!

ಸುತ್ತ ಮಂಡಿಯೂರಿದ ಸಾವಿರ ನಿರೀಕ್ಷೆಗಳು
ಅವಳ ಪುಟ್ಟ ಅಂಗೈ ಮೇಲೆ
ಬ್ರಹ್ಮಾಂಡವನ್ನು ನೇಯುತ್ತಿದೆ!

* * *

ಹಾಸಿಟ್ಟ ಆಕಾಶ;
ಅಂಚಿಗೆ ಬಂಗಾರದ ಕುಸುರಿ ಕೆಲಸ
ತಳ ಕಾಣದ ಕಣ್ಣೊಳಗಿಂದ
ತುಂಟ ಮೌನದ ಚಿನ್ನಾಟ!
ಅಲ್ಲೀಗ..... ಅಸಂಖ್ಯ ಚುಕ್ಕಿಗಳ
ಗೆಜ್ಜೆ ಸಪ್ಪಳ
ರಾಹು ಕೇತುಗಳ ಕನವರಿಕೆಗಳಿಲ್ಲ
ಸೂರ್ಯ ಚಂದ್ರರದು; ಇಲ್ಲಿ ಅನ್ಯೋನ್ಯ ಸಖ್ಯ

ಕಪ್ಪು ಹುನ್ನಾರಗಳ ಕುದುರೆಯೇರಿ ಬರುವ
ಉಲ್ಕೆಗಳ ದಂಡು; ಈ ಅಚ್ಚರಿಗೆ
ಹಾದಿ ಮಧ್ಯೆಯೇ ಸ್ತಬ್ಧ!
ವಸಂತನ ಸಂತ ಪ್ರೀತಿಗೆ
ರೆಕ್ಕೆ ಬಿಚ್ಚಿದ ವೃಕ್ಷ-
ಆಗಸದಗಲಕ್ಕೂ ಸ್ವಚ್ಛಂದ
ಕ್ಷಣ ಮುಂಚೆ ಬಟಾಬಯಲಾಗಿದ್ದ ಅಂಗೈಯಲ್ಲಿ
ಇದೀಗ..... ಅವಳು
ತಿರುಗಿಸಹತ್ತಿದ್ದಾಳೆ ಬ್ರಹ್ಮಾಂಡವೊಂದನ್ನು ಗಿರ ಗಿರನೇ
ಅವನ್ನೆಲ್ಲಾ ಕಾಪಿಡುವಂತೆ
ಎರಡು ಹಣತೆಗಳು
ಅವಳ ಕಣ್ಣುಗಳಲ್ಲಿ ಮಂದವಾಗಿ.....

* * *

ನಾಳೆಗಾಗಿ ಕಾಯುತ್ತಿರುವ ಅವಳ ಸುತ್ತ
ಧೋ ಎಂದು ಸುರಿವ ಇರುಳು
ಉಗುರು ಬೆಚ್ಚಗಿನ ಉಸಿರಿಗೆ
ಮಾಗಿ ಹಣ್ಣಾಗಹತ್ತಿದೆ.

## ಚಪ್ಪರ ಕಳಚುವ ಹೊತ್ತು

ಹಸಿದ ಹೊಟ್ಟೆ
ತೆರೆದ ಬಾಯಿ
ಕಸದ ಬುಟ್ಟಿಗೆ ಗೊತ್ತು
ಇದು
ಚಪ್ಪರ ಕಳಚುವ ಹೊತ್ತು !

ಹಳಸಿದ ಅನ್ನ
ಮಾಸಿದ ಬಣ್ಣ - ಸುಣ್ಣ
ಕಟ್ಟಿದ ತೋರಣ
ಯಾರಲ್ಲಿ...... ಕಸಬರಿಕೆ ತನ್ನಿ
ಆದರ ಹೊಟ್ಟೆಗೆ ಸುರಿದು ಬನ್ನಿ !

ಬೇರು ಬಿಟ್ಟಿರೆ ಕಂಬಗಳು
ನೆಲದಾಳಕ್ಕೆ
ಕೊಡಲಿಯಿಟ್ಟು ಮುರಿದು ಬಿಡಿ
ಸುಕ್ಕು ಬಿದ್ದ ಜರಿ ಕಾಗದಗಳ ಕಿತ್ತು
ಬಿಸಿ ನೀರು ಕಾಯಿಸುವುದಕ್ಕೆ
ಒಳಗೆ ಕೊಡಿ !

ಬಾಡಿಗೆ ತಂದ ಪ್ಲೇಟು - ಲೋಟ
ಲೆಕ್ಕ ಮಾಡಿ
ನಿಮ್ಮ ನಿಮ್ಮ ಎದೆಗಳನ್ನು ತಡವಿ
ಇನ್ನೂ ಉರಿಯುತಿದ್ದರೆ ಬಣ್ಣದ ದೀಪ
ಆರಿಸಿ ಜಾಗೃತೆ;
ಬಾಡಿಗೆಯವನದು ಪಾಪ !

ನಿದ್ದೆ ಕಳಚಿ ಎದ್ದವರ ಕಣ್ಣುಗಳಲ್ಲಿ
ಪಾಳು ಬಿದ್ದ ಮನೆ
ಆಕಾಶವ ತುಂಬಿಕೊಂಡು ನಿನ್ನೆ
ನಕ್ಷತ್ರಗಳ ಗಿಲಕಿ ಆಡಿದವರು
ಇರುಳ ಕಂಬಳಿಯಂತೆ ಹೊದ್ದು
ನೆಲ ಮುಟ್ಟಿದ ಚಪ್ಪರ-
ವನ್ನೇ ನೋಡುತ್ತಾರೆ ಕದ್ದು !

ಗೋಡೆ ತುಂಬಾ....
ಹಚ್ಚೆಟ್ಟಿ ಮದಿರಂಗಿಯಂತೆ
ಯಾರ್ಯಾರೋ ಊರಿದ್ದ ಗುರುತು

ಇನ್ನೊಂದು ಹಬ್ಬ - ಹರಿದಿನದ
ನಿರೀಕ್ಷೆಯಲ್ಲಿ
ನೆರಳಂತೆ ಮನೆ ತುಂಬಾ ಸುಳಿಯುವವರು
ಉಳಿಯುವವರು !

ಕತ್ತಲು ಇನ್ನೂ ಹರಿದಿಲ್ಲ
ಮೌನ ಮುರಿದಿಲ್ಲ
ಗಪ್ಪೆಂದರೂ ಹಕ್ಕಿ-ಚಿಕ್ಕಿಗಳ ದನಿಯಿಲ್ಲ
ಓಯ್.... ಚಪ್ಪರ ಕಳಚುವುದಕ್ಕೆ
ಇನ್ನೇಕೆ ಹೊತ್ತು !
ಮದುವೆ ಮುಗಿಯಿತು
ಮದುಮಗಳೀಗ ಮದುಮಗನ ಸೊತ್ತು.

## ಸಾರ್..... ನನ್ನ ಗಾಡಿಯೆಲ್ಲಿ!?

ಹಾದಿ ಬದಿ
ಕೂಡು ರಸ್ತೆ ಬಳಿ
ವೃತ್ತ ಬರೆದು ಸಜ್ಜಾಗಿ ನಿಂತ
ಟ್ರಾಫಿಕ್ ಪೊಲೀಸರಂತೆ
ಇವರು !

ಡ್ರೈವಿಂಗ್ ಬಿಚ್ಚಿದರೆ
ವಿಧಿಸಿದ ಫೈನು
ರಸೀದಿ
ಒಂದು ಶಂಖಹುಳು
ಈಗಷ್ಟೇ ಸರಿದು ಹೋದ ಹಾಗೆ
ಬಣ್ಣ ಮಾಸಿದ ರಸ್ತೆ ರೂಲ್ಸುಗಳು !

ಮಗು, ಕೆಂಪಿನೆಡೆ ಗಮನ ಕೊಡು
ತುಸು ಎಡವಿದರೂ
ನೆತ್ತರ ಮಡು !
ನೆನಪಿಗೆ ಒಂದ್ಹತ್ತು ಗುಲಾಬಿ ನೆಡು
ಮುಂಜಾವು - ಮುಸ್ಸಂಜೆ
ಜಾಗೃತೆ..... ಸೂರ್ಯನ ನೋಡು !

ಗ್ರೀನು ಎಲ್ಲೋ
ಜತೆಗೆ
ಕಣ್ಣು ಮಿಟುಕಿಸುವ ರೆಡ್ಡು
ನೆನಪಿರಲಿ ತಾಳೆಯಿದೆ
ಕ್ರಮ ತಪ್ಪಿದರೆ ಎಲ್ಲೋ !

ರಸ್ತೆಗಳು ಲೈಸನ್ಸ್ ಬೇಡುತ್ತವೆ
ನಿನ್ನ ಚಕ್ರಗಳು ಸಲೀಸಾಗಿ
ತಿರುಗಿದರೂ......
ದಯಾಮಯನ ರುಜುವೊಂದಿದ್ದರೆ ಸಾಕು
ಯುದ್ಧದ ಸಮಯ
ಪೆಟ್ರೋಲಿರಲಿ ಸ್ಟಾಕು !

ನಿನ್ನ ರಸ್ತೆ ಎಲ್ಲಿ ಮರಿ
ಬೆನ್ನು ತಟ್ಟಿದವರು
ಯಾವ ರಸ್ತೆ ಹಿಡಿದು ಹೋದರು !?
ನಿನ್ನ ಗಾಡಿಯ ಹಿಂದಿನ ಸೀಟು
ನನಗಿರಲಿ ಎಂದವರಲ್ಲಿ

ಕೇಳಬೇಕಾಗಿದೆ ಈಗ
'ಸಾರ್..... ಇಲ್ಲಿದೆ ನನ್ನ ರಸ್ತೆ
ನನ್ನ ಗಾಡಿಯೆಲ್ಲಿ, ಹೇಳಿ ಬೇಗ'

## ಒಂದು ಹುಟ್ಟುಹಬ್ಬದ ಕ್ಷಣ!

ಆ ಭೇಟಿಗೆ
ಒಂದು ಕಪ್ ಕಾಫಿ ಸಾಕ್ಷಿ!

ಮುಖಕ್ಕೆ ಮುಖ ಕೊಟ್ಟೆವು
ಉಸಿರಿಗೆ ಉಸಿರು ಕೂಡುವಂತೆ
ನಮ್ಮ ನಮ್ಮ ಎದೆಯೊಳಗೆ
ಮೊರೆವ ಕಡಲ
ನಾಲಗೆ ಕತ್ತರಿಸಿ

ಆದರೆ ಅವನು ಪಕ್ಕನೆ
ಅಪ್ಪಣೆಯಿಲ್ಲದೆ
ನನ್ನ ಕಣ್ಣೊಳಗೆ ಇಳಿದ
ಕೊಳದ ತುಂಬಾ ಉಂಗುರ

ಬೊಗಸೆ ನೀರೆತ್ತಿ ಕುಡಿದ
ಮಿಂದ
ಮಡಿಯುಟ್ಟು ಬಂದ!

ಅದೇ ಸಿಹಿ
ಗೆಳೆಯಾ, ಅಲ್ಲಿನ್ನೂ ಜೀವ ಹಿಡಿದಿದೆ
ಕಣ್ಣಾ ಮುಚ್ಚೆ ಆಡುವ
ಬಣ್ಣದ ಮೀನುಗಳು
ತಳದ ತಂಪು
ನನ್ನ ಗುರುತು ಹಚ್ಚಿ
ಎದೆಯೊಳಗಿಟ್ಟು ತೂಗಿತು
ಅದೇ ಸಿಹಿ ಗೆಳೆಯಾ ಅಲ್ಲಿನ್ನೂ...

ನಾನು ನಕ್ಕೆ
ಯಾರ ಕೇಳಿ ಇಳಿದೆ ಕುಬೇರನ ಕೊಳಕ್ಕೆ
ಧೈರ್ಯಕ್ಕೆ ರೆಕ್ಕೆ
ಅವನ ಕೈಮುಟ್ಟಿ
ಜುಮ್ಮಂತ ಖುಷಿ ಪಟ್ಟು
ಅಂಗೈ ಬಿಡಿಸಿ
ಚಿತ್ತಾರ ಹೆಣೆದ ಮಲ್ಲಿಗೆ ಬಳ್ಳಿಯ
ಒಂದು ಹೂ ಕಿತ್ತು
ಮೂಗಿಗೆ ಹಿಡಿದೆ
ಅಷ್ಟರಲ್ಲಿ ವೈಟರ್ ಬಂದ
'ಕಾಫಿ ತಣ್ಣಗಾಯಿತು
ಬೇರೆ ತರಲೇ' ಎಂದ

'ಪರವಾಗಿಲ್ಲ' ಕಾಫಿಯನ್ನು
ಹುಟ್ಟು ಹಬ್ಬದ ಕೇಕಿನಂತೆ
ಹಂಚಿಕೊಂಡೆವು !

## ಸಂಪಿಗೆ ಹುಡುಗಿಯ ಕಂಕುಳಲ್ಲಿ

ಹೇಗೆ ನಂಬಲೇ ಒರುಮ ಹೇಗೆ ನಂಬಲೇ
ನಿನ್ನ ಕಂಕುಳಲ್ಲೀಗ ನಾಕು ಮಕ್ಕಳೇ!

ಮೊನ್ನೆ ಅಟ್ಟಿ ರಿಪೇರಿಗೆ ಏರಿದ್ದೆ ಮೇಲೆ
ಕರಿ ಮಸಿ ಕೆನ್ನೆ ಗಲ್ಲ ಮೂಗೆಲ್ಲ
ತಲೆ ಮೇಲೆ ಜೇಡರ ಬಲೆ
ಅಟ್ಟಿ ತುಂಬಾ ಕಟ್ಟಿ ಕರಿ ನಿನ್ನದೇ ನೆರಳು!

ಕೈಯಲ್ಲಿ ಚೂರು ಗೊಂಬೆಯ ಬೆರಳು
ಮದುಮಗಳ ಹರಿದ ಜರಿ ಜರಿ ಲೇಸು
ಮೂಲೆಯಲ್ಲಿ ಪಿಳಿ ಪಿಳಿ; ನೇತ್ರಾವತಿ ತೀರದ ಹರಳು
ಬಿಕ್ಕಳಿಕೆಯಾಗಿ ಕತ್ತಲನು ಕಾಡಿದವಳೇ
ನಿನ್ನ ಕಂಕುಳಲ್ಲೀಗ ನಾಕು ಮಕ್ಕಳೇ!

ನೆಕ್ಕರೆ ಮರದಡಿಯಲ್ಲಿ ಅಕ್ಕರೆ ಸುರಿದವಳು
ಮುಟ್ಟು - ಮುಟ್ಟೊ ಎಂದು
ತಿಳಿಸಿ ಮುಟ್ಟಾದ ಗುಟ್ಟು
ಏನೇ ಇದೇನೆ ಎಂಬೋ ಅಚ್ಚರಿಗೆ
ಸಂಪಿಗೆ ಕಾಯಿ ಎಂದು
ನೆಲ್ಲಿ ಕಾಯಿ ಗಿಡ ಹತ್ತಿ ನಕ್ಕವಳೇ
ನಿನ್ನ ಕಂಕುಳಲ್ಲೀಗ ನಾಕು ಮಕ್ಕಳೇ !

ಊರೆಲ್ಲಾ ದುಡಿದು ಸುರಿಸಿ ಬೆವರು
ಅಬ್ಬನಂತೆ ನಟಿಸಿ ಜೋರು
ಸುಪುರ ಹಾಸಿ ಉಣ್ಣುವ ನಿನ್ನ ಗಂಡ ನಾನು !
ನೀನೋ ಎದೆ ನೀವಿ; ಛೂ ಮಂತ್ರ ಹೇಳಿ
ಕೋಪ ಇಳಿಸುವ ಉಮ್ಮ !
ಉಮ್ಮ ಕೊಟ್ಟು, ತೊಟ್ಟಿಲಿಟ್ಟು
ನರಕದ ಬಾಗಿಲು ಮುಚ್ಚಿ, ಸ್ವರ್ಗದ ಬೆಳಕನು ಹಚ್ಚಿ
ಮುಲಾಯಿಕುಗಳನೆಲ್ಲಾ ಕರೆದು ಜೋ ಜೋ
ಹಾಡಿಸಿ, ಮುದ್ದು ಸುರಿಸಿದ ಒರುಮಾ
ಹೇಗೆ ನಂಬಲೇ......
ನಿನ್ನ ಕಂಕುಳಲ್ಲೀಗ ನಾಕು ಮಕ್ಕಳೇ !

ನೀನು ಬಂದ ಗೌಜಿಗೆ ಉಮ್ಮ ಕತ್ತರಿಸಿದ್ದಾಳೆ ಕೋಳಿ
ಜತೆಗೂಡಿ ನೆಟ್ಟ ಸಂಪಿಗೆ ಗಿಡ ನೋಡು
ಒಣಗಿ ಬಿದ್ದಿದೆ ಹಿತ್ತಲಲ್ಲಿ
ಅದರ ಎದೆಗೇ ಕಾಲಿಟ್ಟು ರೆಕ್ಕೆ ಹರಿದು
ಒಲೆಗಿಕ್ಕಿದ್ದಾಳೆ; ಅಲ್ಲಿ ಬರೇ ಬೆಂಕಿ
ನೀನೀಗ ಕೂಡು ಇಲ್ಲಿ !

## ಅತ್ತಾಳದ ರಾತ್ರಿ

ಅತ್ತರಿನ ಕುಪ್ಪಿಗೆ,
ಚಿಮಿಣಿ ಎಣ್ಣೆ ಸುರಿದು; ಬತ್ತಿ ಇಳಿಸಿ
ನಡು ಇರುಳನು ಕೊರೆದು
ಗೂಡಿನ ಕೋಳಿ ನಿದ್ದೆ ಕೆಡದ ಹಾಗೆ
ಹೆಜ್ಜೆ ಹಿಡಿದು
ಅಲ್ಲಾಹುವಿನ ಬೆಳಕನು ಕರೆಯುವಳು
ಅತ್ತಾಳ ರಾತ್ರಿ; ಉಮ್ಮ
ಎಲ್ಲರನೂ ಕರೆ ಕರೆದು ಉಮ್ಮು ಉಣಿಸುವಳು.

ಬಿಸಿ ನೀರಿಟ್ಟು
ಕಣ್ಣಿಂದ ಕತ್ತಲ ಉಜ್ಜಿ
ಮುಂಜಾವಿನ ಗುಮ್ಮ ತೋರಿಸಿ
ಅತ್ತಾಳದ ಬಟ್ಟಲಲ್ಲಿ ಮುತ್ತಾಳದ ಕನಸು

ಬಡಿಸುವಳು; ಉಮ್ಮಾ
ಎಲ್ಲರನೂ ಕರೆಕರೆದು ತುತ್ತು ಉಣಿಸುವಳು

ಕೋಣೆ ತುಂಬಾ ಸುಳಿದಾಡುವ
ಪೆರುನಾಳಿನ ಪರಿಮಳ
ಬೊಗಸೆ ಚಾಚಿ ಮೊಗೆ ಮೊಗೆದು
ತುಂಬಿ ಮಡಿಲು
'ಘಂ' ಎಂದು ಮೂಗಿಗೆ ಹಿಡಿದು
ಕನಸು ಕಾಣುತ್ತಾ ಮಲಗಿರೇ ಎಂದು
ಮತ್ತೆ ಜೋ ಜೋ ಹಾಡುವಳು; ಉಮ್ಮ
ಜೋ ಜೋ ಹಾಡುವಳು.

## ಅವಳು

ಕತ್ತಲು ನಿನ್ನನ್ನು ಒಂದು ಪ್ರಶ್ನೆಯಾಗಿ
ಹೆತ್ತು ಬಿಟ್ಟಿತು
ನೋವು ಕುಪ್ಪಸ ಹರಿದು
ಹಾಲೂಡಿತು
ಸಾವು ತೊಟ್ಟಿಲಾಗಿ ತೂಗಿತು!

ಜಿಪುಣ ಸೂರ್ಯ
ಬೆಳಕನ್ನ ನಿನ್ನಿಂದ ಬಚ್ಚಿಟ್ಟ
ಇರುಳೋ ತನ್ನ ಕಣ್ಣ ಕಿತ್ತು ಹಣತೆ ಮಾಡಿ ಹಚ್ಚಿಟ್ಟ!
ಹೂವಿನ ತೋಟಗಳು ಮುಖ ತಿರುವಿದವು
ಚಿಟ್ಟೆಗಳು ಆದರ ಬಾಲ ಹಿಡಿದವು
ನಾಲ್ಕು ಎಳೆ ಕಂಬನಿಯನ್ನು ಎಳೆದು ಪೋಣಿಸಿದೆ
ಹಾಡು ನಿನ್ನ ಕಣ್ಣಲ್ಲಿ

ಹೂವಾಗಿ ಇಣುಕ ಬೇಕಿತ್ತು......
ಮುಳ್ಳು ಗಂಟಲಲ್ಲೇ ಕಟ್ಟಿ ಹಾಕಿತು !

ಒಂದು ಗುಬ್ಬಚ್ಚಿ ನೀನು
ನಿರ್ಲಕ್ಷ್ಯಗಳನ್ನೆಲ್ಲಾ ಗುಡಿಸಿ ತಂದೆ
ಗೂಡು ಕಟ್ಟುವ ಕನಸು ಕಂಡೆ
ಒಂದಿಷ್ಟು ಪ್ರೀತಿ ಸಾಲ ಕೊಡಿರೇ...
ಅವನ್ನು ದಾರವಾಗಿ ಬಳಸಿ
ನನ್ನ ದುಮ್ಮಾನಗಳನೆಲ್ಲಾ.....
ನಿಮ್ಮ ಕಣ್ಣ ದಂಡೆಯಲ್ಲಿ ಸರಿದು-
ನಿಂತ ಕಸಕಡ್ಡಿಗಳನ್ನೆಲ್ಲಾ
ಒಟ್ಟಾಗಿ ಕರೆದು ಗೂಡಾಗಿ ನೇಯುವೆ
ಬೊಗಸೆಯೊಡ್ಡಿದೆ !

ಸೂರ್ಯ ಕತ್ತಲನು ಓರೆ ಮಾಡಿ ಇಣುಕಿದ
ತೋಟಗಳು ಪಿಸುಗುಟ್ಟಿದವು
ಸರ್ವಸಾಕ್ಷಿಗಳು ಕಟಕಟೆಯೆದುರು ತಲೆತಗ್ಗಿಸಿವೆ
ಅವಳ ಗೋರಿಯ ಕಣ್ಣೊಳಗಿಂದ
ಎದ್ದು ನಿಂತ ಗುಲಾಬಿ ಗಿಡ....
ದೇವರೆಡೆಗೆ ಬಾಗಿ
ವಾದಕ್ಕೆ ಸಿದ್ಧವಾಗತೊಡಗಿದೆ !

## ಕನಸು

ಸಾವು ಅದೆಷ್ಟು ಹಗುರ
ಮತ್ತು
ಅದು ಬಿಟ್ಟು ಹೋಗುವ ಮೌನ
ಅದೆಷ್ಟು ಭಾರ !

- ೨ -

ನಿಮ್ಮಲ್ಲಿ ಸಲಾಕೆಯಿದ್ದರೆ
ಈ ಮೌನವನ್ನು ಕೊರೆಯಿರಿ
ಅಲ್ಲಿ
ದಿಗ್ವಿಜಯಕ್ಕೆ ಹೆಜ್ಜೆಯಿಟ್ಟ ಕುದುರೆ
ಯ ಒಂದೆರಡು ಮೂಳೆಗಳು
ಯಾವದೋ ರಥದ ಉತ್ತುಂಗದಲ್ಲಿ
ವಿೂಸೆ ತಿರುವುತ್ತಿದ್ದ ಪತಾಕೆಯ

ಸುಕ್ಕುಗಟ್ಟಿದ ಹರಕು ಚೂರುಗಳು
ಕೋಡಂಗಿಗಳಾಗಿ ಕುಣಿಯುವುದನ್ನು
ಕಾಣದಿದ್ದರೆ ಮತ್ತೆ ಹೇಳಿ !
ತುಸು ದೂರಕ್ಕೆ
ಕುಸಿದ ಕೋಟೆಯೊಂದು ಆಕಾಶ ನಿಟ್ಟಿಸುತ್ತದೆ.
ರೆಕ್ಕೆ ಹರಿದ ಗರುಡನೊಬ್ಬ
ಅದರ ಕಣ್ಣೊಳಗೆ ಚಡಪಡಿಸುವುದನ್ನು
ಕಾಣಬಹುದು
ಎಲ್ಲಿ ಹೋದವು ಜನಾನಗಳು
ಯಾವ ಕತ್ತಲು ಕವುಚಿ ಬಿದ್ದವು !?
ಜೋಕೆ !
ಅಲ್ಲೆಲ್ಲೋ ರೂಪ ಕಳೆದುಕೊಂಡ ಹಂಸ
ತಲ್ಪಗಳು
ಅಳುತ್ತಿರಬಹುದು. ಕೊರೆದಂತೆ ಮುಂದೆ...
ಹೆಪ್ಪುಗಟ್ಟಿದ ಒಂದು ನದಿ
ಅಂಗಾತ
ಕಡಲಿನತ್ತ ಚಾಚಿದ ಅದರ ನೀಳಬಾಹು
ಹುಳು ಹುಪ್ಪಟೆ ತಿಂದು ಕೊಳೆತಿರಬಹುದು
ಈ ಮೌನದ ತಳಕ್ಕೇ ಇಣುಕಿ ನೋಡಿ
ಹರಿದ ಚಿಟ್ಟೆ ಅಥವಾ.....
ಮುರಿದ ಗಾಳಿಪಟದ ರೆಕ್ಕೆ
ನಿಮ್ಮೊಂದಿಗೆ ಮಾತಿಗೆ ತೊಡಗುತ್ತದೆ.
ಆದರ ಎದೆಗೇ ಕಿವಿಯಾನಿಸಿ, ಈಗ...

ಅಲ್ಲೊಂದು ಕವಿತೆ ಮುಲುಗುಟ್ಟುವುದನ್ನು
ಕೇಳಿ.

- ೩ -

ಇಷ್ಟೆಲ್ಲವನ್ನು
ಮುಕ್ಕಳಿಸಿದ ಮೌನದಲ್ಲಿ ಬಚ್ಚಿಟ್ಟ ಸಾವೇ...
ನೀನೊಂದು ಅಚ್ಚರಿ !
ಪ್ರಾಯ ತುಂಬಿದವಳ ಹಿಂದೆ ಬೀಳುವ
ಪೋರ ಅಥವಾ
ಎಲ್ಲವನ್ನೂ ಕಳಚಿ ಮತ್ತೆ
ಮಗುವಾಗುವ ಕನಸು !

## ಕೊಡುವ ಹಾಡು

ಮದಿರಂಗಿ ಗಿಡದ ಕೆಂಪು ಕಣ್ಣುಗಳು
ಬೆಳ್ಳಗಾಯಿತು ತಾಯೇ
ನಿನ್ನ ಮೌನದ ಹರಿತಕ್ಕೆ !

ಕಳೆದ ದಿನಗಳ ಚೂರುಗಳನ್ನು
ಬಂದ ರದ್ದಿಯವನಿಗೆ ತೂಗಿಕೊಟ್ಟೆ
ದಕ್ಕಿದ ಕೆ.ಟಿ. ಚಹಾದೊಳಗಿಂದ
ನೀನೋ..... ನಿಟ್ಟುಸಿರಾಗಿ
ನನ್ನ ನಾಲಗೆ ಸುಟ್ಟೆ !

ಕೂಡೋಣವೇ ಇನ್ನೊಮ್ಮೆ
ಎಷ್ಟೋ ಆಸೆಯ ಬರ್ಫಗಳು, ಸಿಟ್ಟಿನ ಕೆಂಡಗಳು

ಹಿಗ್ಗಿನ ಪುಗ್ಗೆಗಳು
ಕರಗಿ, ಕಿಡಿಯಾಗಿ, ಉಬ್ಬಿ - ಒಡೆದ
ಅದೇ ಚಾವಡಿಯಲ್ಲಿ
ಮರೆವಿನ ಕತ್ತಲನ್ನು ಮಧ್ಯಸ್ಥಿಕೆಗಿಟ್ಟು
ಆಡೋಣವೇ ರಾಜಿ ಮಾತು!
ಅಲ್ಲಿ
ಪಗಡೆಯ ಹಾಗೆ ನಿನ್ನ ಹೃದಯವ ಹಾಸು
ದಾಳದಂತೆ ಉರುಳಲಿ ನನ್ನ ಬಯಕೆಯ ಕೂಸು

ನಿನ್ನ ಹೃದಯದ ಮಾತುಗಳಿಗೆ
ಕಿವಿಯಾಗಿ ಬರುವೆ
ನಡುಗುವ ನಿನ್ನ ಹೆಜ್ಜೆಗೆ
ನನ್ನೆದೆಯಲ್ಲೊಂದು ಅನಾಥ ದಾರಿ
ಇಡು ಹೆಜ್ಜೆ ಒಂದು ಬಾರಿ

ನಿನ್ನ ತೊಟ್ಟಿಲು ತೂಗು ತಾಯಿ
ಅದರ ಸದ್ದಿಗಿಲ್ಲಿ ಕಣ್ತುಂಬ ನಿದ್ದೆ
ಮುಂಜಾವಿನ ಬಿಸಿಲಿಗೆ ಮುಟ್ಟಿ ನೋಡಿದರೆ
ಕಣ್ಣ ದಂಡೆ ಒದ್ದೆ!
ನಿನ್ನ ಸುಕ್ಕುಗಳೆಡೆ ಕಟ್ಟಿಟ್ಟ ಕಥೆ-
ಗಳನ್ನೆಲ್ಲ ಮತ್ತೆ ಬಿಚ್ಚು
ಕೊಡವಿ ಧೂಳು; ಕತ್ತಲಿದ್ದಲ್ಲೆಲ್ಲ ಹಣತೆ ಹಚ್ಚು!
ಕಿಟಕಿಯಾಚೆ ಮಗುವಿನಂತಹ ಸೂರ್ಯ
ಸ್ಪರ್ಶಕ್ಕೆ; ತೆರೆದ ಬಾಗಿಲ ನೋಡು
ನಿನ್ನ ಕಥೆಯಲ್ಲಿ ನನ್ನ ಹಕ್ಕಿ ಗೂಡು!

# ಹನಿಗಳು

## ವ್ಯಕ್ತಿತ್ವ

ಅಮ್ಮನಿಗೆ ಗುಲಾಬಿ ಎಂದರೆ ಇಷ್ಟ
ಗೊತ್ತು ಆವಳಿಗೆ
ಮುಳ್ಳಲ್ಲಿ ಅರಳುವ ಕಷ್ಟ !

## ವಿಜಯ

ಬುದ್ಧ
ಆಶೆಗೆ ಒದ್ದ
ಗೆದ್ದ !

## ಅವಲಂಬನೆ

ವಿಶ್ವ ಯಾರೋ ಕಟ್ಟಿದ ಹುತ್ತ
ನಾವು ?
ಹಾವು !

## ವಾಸ್ತವ

ಗಲ್ಲಿಗೇರಿಸುವ ಮುನ್ನ
ಮುಚ್ಚುತ್ತಾರೆ ಮುಖ
ಇದು
ಬುರ್ಖಾದ ಬಗ್ಗೆ ಅಮ್ಮನ ತರ್ಕ

## ಅಭಿವ್ಯಕ್ತಿ

ಹೆಪ್ಪುಗಟ್ಟಿದ ಮೌನ
ಇದೀಗ
ಕಣ್ಣು ಬಟ್ಟಲಲಿ
ಕವನ

## ಗಾಯ

ಕರುಣಾಳುವಿನ ಮನೆಯಲ್ಲಿ
ಪುಣ್ಯದ ಕೊಯ್ಲು ಕೊಯ್ಯುವವರೇ
ತಮ್ಮ ತಮ್ಮ ಗಂಡಸರ
ಹಸಿವ ನೆನೆದು ಮೈ ಸುಟ್ಟು
ರೊಟ್ಟಿ ತಟ್ಟುವವರೇ
ಕಂದನ ಎದೆಗೊತ್ತಿ, ಕಡಲಾಚೆ ಹಾರಿದ
ತನ್ನವನ ಕನಸು ಕಾಣುವವರೇ
ಬನ್ನಿರೇ ಬನ್ನಿ....
ನಿನ್ನೆ ಗೊಂಬೆಯ ತಬ್ಬಿ ನಿದ್ದೆಗೆ ಜಾರಿದವಳು
ಇದೀಗ ತನ್ನ ಒದ್ದೆ ಲಂಗವ ಕಂಡು
ಬಿಕ್ಕುವ ತಂಗಿಯ ಕಾಣಿರೇ....

ಆಟಕ್ಕೆ ಕರೆಯ ಬಂದ ಜಮ್ರಿ ಜುಬ್ಬಿ ಮರಿಯ
ಅಂಗಳದಲ್ಲೇ ನಿಂತರೆ
ರೊಟ್ಟಿಯ ಒಲೆಯಲ್ಲೇ ಬಿಟ್ಟಿ ಉಮ್ಮಾ
ಹೊಸ ಸೀರೆಯ ಹರಿದಳೇ
ಕುಡುಗೋಲು ಹಿಡಿದು ಎತ್ತ ಹೊರಟೆ ಪಲ್ಲಿಮ್ಮಾ
ಆವಳ ಗಾಯಕ್ಕೆ
ಯಾರ ಹೃದಯಕ್ಕಿಳಿದು ಯಾವ ಮದ್ದಿನ ಬೇರಿಗೆಂದು ತಡಕುವೆ!

ಮಸೀದಿಯಿಂದ ಬಂದವರೇ
ಸುತ್ತಿಗೆ ತಂದಿರೇ
ಆವಳ ಕಣ್ಣ ಕಪಾಟನ್ನು ಒಡೆದು
ಅಡಗಿ ಕುಳಿತ ಕಳ್ಳನ
ಹುಡುಕಿ ತೆಗೆಯಿರಿ

ಮ್ಯೊಲಾಂಜಿಯ ಬಣ್ಣ; ಮುಖ ತುಂಬಾ
ಮೆತ್ತಿಕೊಂಡು, ನಾಚುವ ತಂಗಿಯ
ಬುರ್ಖಾದೊಳಗೆ ಮುಚ್ಚಿ ಬಿಡಿರೇ....

## ಹುಚ್ಚು ಹುಡುಗ

ಇರುಳು ಸಾಗರದಂತೆ
ಬಿದ್ದು ಕೊಂಡಿರುವಾಗ ಇವನು
ನಿದ್ದೆಯನ್ನು ಬಲೆಯಂತೆ ಬೀಸಿ
ಸ್ವಪ್ನಗಳನ್ನು ಆಯುತ್ತಾನೆ!

ದುರಾಸೆಯ ಹುಡುಗಾ...
ಪುಟ್ಟಿ ದೋಣಿ ತುಂಬಾ
ಸ್ವಪ್ನಗಳ ಗೋರುತ್ತಾ ತುಂಬುವನು
ನೆಲೆ ತಪ್ಪಿ, ಇರುಳು ತೋಳು ಎತ್ತಿ ಒಗೆದರೆ
ಹಗಲ ತೀರದಲ್ಲಿ ಪೆಚ್ಚಾಗಿ ಬಿದ್ದುಕೊಳ್ಳುವನು

ಸ್ವಪ್ನಗಳಿಗಾಗಿ ತನ್ನ ನಿದ್ದೆಗಳನ್ನೂ
ಸಾಲಿಗನಂತೆ ಕಾಡುವ

ಹಗಲಿಗಾಗಿ ತನ್ನ ಸ್ವಪ್ನಗಳನ್ನೂ
ಆಡವಿಡುವ ಇವನ
ಮೌನದ ತಿಜೋರಿಯಲ್ಲಿ
ಅದೆಷ್ಟು ಸಾಲಪತ್ರಗಳು !

ಠೇವಣಿಯೆಂದಿಟ್ಟ ನಾಳೆಗಳೆಲ್ಲಾ
ಬೊಗಸೆಯಿಂದ ಮಂಜಿನಂತೆ ಜಾರಿ
ಹೋಗುವುದನ್ನು ಕಂಡು
ತಲ್ಲಣಗೊಂಡು
ಅಳುವನು !

## ದಡ ಕಾಣುವ'ವ'ರೆಗೆ...

ಅಗೋ...ಆ ಕಡಲು

ಕೋಟಿ ಹರೆಯಗಳ
ತನ್ನೆಡೆಗೆ ಬಾಚಿ
ಜೋಕಾಲಿ ಮಾಡಿ ತೂಗುವ
ಈ ಶಹರದ
ಹೃದಯ !

ಮೌನದ ತೀರದಲ್ಲಿ
ಆಸೆಗಳು
ಸಾಲು ಮರಗಳಂತೆ ನಿಂತಿವೆ
ಕಣ್ಣು ಕೊಟ್ಟು

ಸುಡು ಮಧ್ಯಾಹ್ನ
ಗೋರಿಗಲ್ಲುಗಳಂತಿದ್ದ

ಮಹಲುಗಳೂ ಸಹ...
ಇದೇ ಮೊದಲ ಬಾರಿ
ಪ್ರೇಮಕ್ಕೆ ಸಿಕ್ಕು ತಲ್ಲಣಗೊಂಡವ್ರುಗಳಂತೆ
ತುಸು ನಾಚಿ
ಮುಗಿಲತ್ತ ತುಟಿ ಚಾಚಿ

ಸರ್ವರಾಗಗಳೂ
ಆ ಹೃದಯದೊಳಗೆ ಬಿರುಗಾಳಿ
ಎಬ್ಬಿಸುವ ಈ ಹೊತ್ತು
ಕೊಡುವೆಯಾದರೆ ಕೊಡು
ದೋಣಿಗಳಂತೆ ತೇಲುವ ನಿನ್ನೆರಡು
ಕಣ್ಣುಗಳನ್ನು, ಆ ಮಕ್ಕಳು
ಅವನ್ನೇರಿ ದಡಕಾಣುವವರೆಗೆ
ಹಾಕಲಿ ಹುಟ್ಟು!

## ಶಹರದಲ್ಲಿ ಹದಿಹರೆಯ

ಕೋಣೆಯ ಮಧ್ಯೆ
ಗೋಡೆ ಬಿತ್ತಿ
ಮನೆಗಳ ಬೆಳೆ ತೆಗೆವ ಶಹರದಲ್ಲಿ
ಹದಿಹರೆಯ ಕಾಲಿರಿಸಿ
ಮರಗಿಡಗಳ ನೆನಪು ಹುಟ್ಟಿಸುವುದು !

ಪ್ರಾಯದ ತೆನೆ ತೂಗಿ ಬಾಗುವ ಮಕ್ಕಳು
ಬಿಸಿಯುಸಿರಗರೆದರೆಂದು
ಕನಸಿನಲ್ಲಿ ಬೆಚ್ಚಿ
ತಾಯಿ ದೀಪ ಹಚ್ಚಿ ಕೂರುವಳು

ಕತ್ತಲಲ್ಲಿ ಬೆವರುತ್ತಾ
ನಿದ್ದೆ ಹೋದ ಹೆಣ್ಣು ಮಗಳು
ಸ್ವಪ್ನದ ಒತ್ತಲಲ್ಲಿ

ಜಾತ್ರೆ ಹೂಡಿದ್ದ ಏ
ಕಾಂತದ ಜತೆ ವ್ಯಾಪಾರಕ್ಕಿಳಿದು
ತನಗೆ ತಾನೆ ನಗುವಳು

ಅಣ್ಣ ಆಯಿಯ ನಡುವೆ
ಒದ್ದೆಯಾದ
ಜೀನ್ಸ್ ಹುಡುಗನ
ಬಿಸಿಯುಸಿರು ಬಡಿದು
ಕೋಣೆಯ ಗೋಡೆ ಬಿರುಕು ಬಿಡುವವು!

## ವಿದಾಯ

ಅವರ ನರನಾಡಿಗಳಲ್ಲಿ
ಕುಳಿತ ಹಕ್ಕಿಗಳೇ ಹಾಡಿ...
ಇರುಳ ದಾಹಕ್ಕೆ ಸಹಿಸದೆ ಸೂರ್ಯನ
ಮೊಗೆ ಮೊಗೆದು ಕುಡಿವವರಿಗೆ
ಮರಗಿಡಗಳೇ ಚಾಮರಗಳಾಗಿ
ಮೋಡಗಳೇ ಕರಗಿ
ಮೌನದ ಹಂಗಿನಿಂದ
ಆ ಎರಡು ಹೃದಯಗಳ ಕೈ ಹಿಡಿದು ನಡೆಸಿ

ಪರಸ್ಪರ ಕಣ್ಣುಗಳ ಬಿಗಿದ
ಬಳ್ಳಿಯನ್ನು ಕಡಿದೊಗೆವ
ಅಸೀಮ ಸಾಹಸಕ್ಕೆ ಬೆಕ್ಕಸ ಬೆರಗಾದವರೇ
ಅವರ ಹೃದಯಗಳ
ಕಚ್ಚಿ ಹಿಡಿದಿರುವ ತಾಯಿ ಬೇರನ್ನು ಗಮನಿಸಿ !

ಸುಖದ ಬೆನ್ನು ಹತ್ತಲು
ದುಃಖದ ಕುದುರೆಯೇರಿದ ಸವಾರರವರು
ಸಂಧಿಸುವ ದೃಷ್ಟಿಗಳಲ್ಲಿ ಹನಿಯಾಗಿ
ಕರಗಿ ಹೋಗುವ ಭಯಕ್ಕೆ
ಬೆನ್ನು ಹಾಕಿ ನಿಂತಿರುವರು !

ಕೈಯಲ್ಲಿ ಇತಿಹಾಸವನ್ನೇ
ಚಾವಟಿಯಂತೆ ಧರಿಸಿರುವರು
ನೆರೆದ ಜನರೆದುರಿಂದ
ಕವಿತೆಯ ಪುಟಗಳ ಹಾಗೆ ಸರಿದು ಹೋಗುವರು

ಜಾತ್ರೆಯಲ್ಲಿ ಕಳೆದು ಹೋದ ಮಗುವಿನಂತೆ
ಪರಸ್ಪರ ಕಳೆದು ಹೋಗಬೇಕಾದ
ಅವರಿಗೆ ಗೊತ್ತು
ಆ ಮೂಲಕ
ಕಳೆದದ್ದನ್ನೆಲ್ಲಾ ಮತ್ತೆ ಪಡೆವ ದುರಾಸೆಯ ಕುರಿತು !

ಬಶೀರ್ ನಿನ್ನ ಕವಿತೆಯಲ್ಲಿ.....

ದೈತ್ಯ ವೃಕ್ಷದ ಎದೆಗೂಡೊಳಗೆ ಸಿಕ್ಕಿ
ಚೆಲ್ಲಾಪಿಲ್ಲಿಯಾದ ಗಾಳಿಪಟ,
ಮುಖ ತಿರುವುತ್ತಿರುವ ಹೂವಿನ ತೋಟ,

ಮಿಲಿಟರಿ ವ್ಯಾನಿನತ್ತ ಕೈ ಬೀಸಿದ ಮಗು,
ತುತ್ತುಣಿಸಿ ಜೋಹಾಡುವ ಉಮ್ಮನ ಬೆಳ್ಳನೆ ನಗು,
ಗೊಂಬೆ ಒಡೆದ ಮದುಮಗಳ ಹರಿದ ಜರಿಲೇಸು,

ಗಲ್ಲಿಗೇರಿಸುವ ಮುನ್ನ ಮುಚ್ಚಲಾದ ಮುಖ,
ತಾಯ ಮೊಗದ ಮೇಲೆ ಮಗು ಪರಚಿದ ಗಾಯ,
ಒರೆಯೊಳಗೆ ನಿದ್ದೆ ಹೋದ ಖಡ್ಗ,

ಎದೆಯಂಗಳದಲ್ಲಿ ಕಣ್ಣು ತಪ್ಪಿಸಿ ಇಟ್ಟ ನಾಕು ಚುಕ್ಕಿ,
ಸರ್ವಶಕ್ತನ ಕಣ್ಣಹನಿ,
ಗುಬ್ಬಚ್ಚಿ ಕೊಕ್ಕಲ್ಲಿ ಕಚ್ಚಿದ ಬೆಳಕಿನ ಕಡ್ಡಿ.

ಬಶೀರ್ ಕವಿತೆ ನಿನ್ನ ಕೈ ಬಿಡದಿರಲಿ.

-ಜಯಂತ ಕಾಯ್ಕಿಣಿ.